**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪರೀಕ್ಷಾಂಗ/ಸ.ಡಿ.ಪಿ.ಜಿ.ಡಿ/ಪರೀಕ್ಷೆಗಳು/01/2024–25 ದಿನಾಂಕ: 26.09.2025

# ಅಧಿಸೂಚನೆ

**ವಿಷಯ: 2024–25ನೇ ಸಾಲಿನ ಸರ್ಟಿಫಿಕೇಟ್ ಪ್ರೋಗ್ರಾಮ್ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ಕಂಡಿಕೆ ಸಂಖ್ಯೆ: 04; ದಿನಾಂಕ: 20.09.2025.

2024–25ನೆಯ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರದಲ್ಲಿ ಮತ್ತು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ವಿದ್ಯಾಸಂಸ್ಥೆಗಳಲ್ಲಿ ವಿವಿಧ ವಿಷಯಗಳಲ್ಲಿ ನಡೆಯುತ್ತಿರುವ ಒಟ್ಟು 33 ಸರ್ಟಿಫಿಕೇಟ್ ಪ್ರೋಗ್ರಾಮ್‌ಗಳಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ಹಾಗೂ ಅರ್ಜಿ ಸಲ್ಲಿಸಲು ಅಧಿಸೂಚನೆ ಹೊರಡಿಸಲಾಗಿದೆ.

## ಭಾಗ–1

ಜ್ಯೋತಿಷ್ಯ, ವಾಸ್ತು, ಹಸ್ತಸಾಮುದ್ರಿಕಶಾಸ್ತ್ರ, ಪಾಲಿ, ಬುದ್ಧಿಸಂ, ಯೋಗ, ಸಾಂಖ್ಯಯೋಗ, ಯೋಗಿಕ್ ಹೀಲಿಂಗ್, ಆಯುರ್ಜ್ಯೋತಿಷ್ಯ –ಈ 9 ವಿಷಯಗಳಲ್ಲಿನ ಸರ್ಟಿಫಿಕೇಟ್ ಪ್ರೋಗ್ರಾಮ್‌ಗೆ ಸಂಬಂಧಿಸಿದ ಪರೀಕ್ಷಾ ಶುಲ್ಕಗಳ ವಿವರಗಳು ಹಾಗೂ ಸೂಚನೆಗಳು:

| ವಿದ್ಯಾರ್ಥಿಗಳು ಪ್ರವೇಶಾತಿ ಪಡೆದ ಸಂಸ್ಥೆಗಳಿಗೆ ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಪಾವತಿಸಲು ಅಂತಿಮ ದಿನಾಂಕ: | ವಿದ್ಯಾರ್ಥಿಗಳು ದಂಡಶುಲ್ಕ ಸಹಿತ ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಪಾವತಿಸಲು ಅಂತಿಮ ದಿನಾಂಕ: | ಸಂಸ್ಥೆಗಳು ಅರ್ಜಿಗಳನ್ನು ಕ್ರೋಢೀಕರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಹಾಗೂ ಶುಲ್ಕ ಪಾವತಿಸಲು ಕೊನೆಯ ದಿನಾಂಕ: |
|---|---|---|
| **15.10.2025** | **18.10.2025** | **23.10.2025** |

| **ಪರೀಕ್ಷಾ ಶುಲ್ಕದ ವಿವರ** | |
|---|---|
| ಪರೀಕ್ಷಾ ಶುಲ್ಕ | **ರೂ. 500.00** |
| ಡಂಡ ಶುಲ್ಕ ಸಹಿತ ಪರೀಕ್ಷಾ ಶುಲ್ಕ | **ರೂ. 100 + 500 = 600.00** |

| | |
|---|---|
| ಪರೀಕ್ಷೆ ನಡೆಯಲಿರುವ ಸಂಭಾವ್ಯ ದಿನಾಂಕ | **16.11.2025** |

**ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ಜ್ಯೋತಿಷ್ಯ, ವಾಸ್ತು, ಹಸ್ತಸಾಮುದ್ರಿಕ ಶಾಸ್ತ್ರ, ಪಾಲಿ, ಬುದ್ಧಿಸಂ, ಯೋಗ, ಸಾಂಖ್ಯಯೋಗ, ಯೋಗಿಕ್ ಹೀಲಿಂಗ್, ಆಯುರ್ಜ್ಯೋತಿಷ್ಯ ವಿಷಯಗಳಲ್ಲಿನ ಸರ್ಟಿಫಿಕೇಟ್ ಪ್ರೋಗ್ರಾಮ್‌ನ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಹಾಗೂ Hard copy ಅರ್ಜಿಯನ್ನು ಪ್ರವೇಶಾತಿ ಪಡೆದ ಸಂಸ್ಥೆಯ ಮೂಲಕವೇ ಸಲ್ಲಿಸಬೇಕು.

26/9/25

2. ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ತರಗತಿ ಉತ್ತೀರ್ಣತಾ ಅಂಕಪಟ್ಟಿಯ ನಕಲುಪ್ರತಿ ಲಗತ್ತಿಸುವುದು ಕಡ್ಡಾಯವಾಗಿದೆ.

3. ಅರ್ಜಿಯನ್ನು ಪ್ರವೇಶಾತಿ ಪಡೆದ ಸಂಸ್ಥೆಯ ಮೂಲಕ ಪಡೆದುಕೊಳ್ಳುವುದು.

4. ಪ್ರತಿ ಪತ್ರಿಕೆಯಲ್ಲಿ ಒಟ್ಟು 80 ಅಂಕಗಳಿಗೆ ಲೇಖನ/ಪ್ರಾಯೋಗಿಕ ಪರೀಕ್ಷೆ ನಡೆಯಲಿದೆ ಹಾಗೂ 20 ಅಂಕಗಳಿಗೆ ಆಂತರಿಕ ಅಂಕಗಳು ಇರಲಿವೆ.

**ಸಂಸ್ಥೆಯ ಮುಖ್ಯಸ್ಥರುಗಳಿಗೆ ಸೂಚನೆಗಳು**

1. ಪರೀಕ್ಷಾ ಅರ್ಜಿ ಸಲ್ಲಿಸುವ ಸಂಸ್ಥೆಗಳು 2024–25ನೆಯ ಸಾಲಿಗೆ ಮಾನ್ಯತೆಯನ್ನು ನವೀಕರಿಸಿರಬೇಕು. ಮಾನ್ಯತೆಯನ್ನು ನವೀಕರಿಸದಿರುವ ಸಂಸ್ಥೆಗಳು ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

2. ಸಂಸ್ಥೆಯ ಮುಖ್ಯಸ್ಥರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗದಿಂದ ಪರೀಕ್ಷಾ ಅರ್ಜಿಗಳನ್ನು ಪಡೆದುಕೊಂಡು ವಿದ್ಯಾರ್ಥಿಗಳಿಗೆ ನೀಡುವುದು.

3. ಸಂಸ್ಥೆಯ ಮುಖ್ಯಸ್ಥರು ಎಲ್ಲಾ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಸ್ವೀಕರಿಸಿ SBI Payment gateway ಮೂಲಕ ವಿಶ್ವವಿದ್ಯಾಲಯಕ್ಕೆ **ದಿನಾಂಕ: 23.10.2025**ರ ಮೊದಲು ಒಂದೇ ಕಂತಿನಲ್ಲಿ ಪಾವತಿಸುವುದು.

   **ಶುಲ್ಕ ಪಾವತಿಸುವ ವಿಧಾನ:** ksu.ac.in ⇨ Fee payment ⇨ Educational Institutions ⇨ KARNATAKA SANSKRITH VISHWAVIDYALAYA Karnataka ⇨ Payment Category ⇨ Certificate/Diploma/PG Diploma Exam Fees.

**ಸಂಸ್ಥೆಯ ಮುಖ್ಯಸ್ಥರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ದಾಖಲೆಗಳು:**

ಅ. Covering letter

ಆ. Copy of Fee paid receipt

ಇ. ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿದ ಎಲ್ಲ ವಿದ್ಯಾರ್ಥಿಗಳ ಪ್ರತ್ಯೇಕ ಅರ್ಜಿಗಳು. (ಪ್ರತಿ ವಿದ್ಯಾರ್ಥಿಯ ಅರ್ಜಿಯೊಂದಿಗೆ ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರ + ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ತರಗತಿ ಉತ್ತೀರ್ಣತಾ ಅಂಕಪಟ್ಟಿಯ ಪ್ರತಿ ಲಗತ್ತಿಸುವುದು ಕಡ್ಡಾಯವಾಗಿದೆ.)

ಈ. ನವೀಕೃತ ಮಾನ್ಯತೆ ಪತ್ರದ ಪ್ರತಿ.

ಉ. ವಿದ್ಯಾರ್ಥಿಯ ಹೆಸರು, ತಂದೆಯ ಹೆಸರನ್ನೊಳಗೊಂಡಂತೆ ಆಂತರಿಕ ಅಂಕಗಳ ದೃಢೀಕೃತ ಪಟ್ಟಿ.

4. ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಎಲ್ಲಾ ಪರೀಕ್ಷಾ ಸಂಬಂಧಿ ಮಾಹಿತಿಗಳು ಮತ್ತು FORM–01 ಹಾಗೂ FORM–02 ನಮೂನೆಗಳನ್ನು ಕಡ್ಡಾಯವಾಗಿ ಆಂಗ್ಲಭಾಷೆಯಲ್ಲಿ Microsoft Excel Sheet (Font Name and Size – Cambria–12)ನಲ್ಲಿ ಸಿದ್ಧಪಡಿಸಿರಬೇಕು. ವಿದ್ಯಾರ್ಥಿಗಳ ಮಾಹಿತಿಯನ್ನು Microsoft Word, Pdf, Imageನಲ್ಲಿ ಕಳುಹಿಸಬಾರದು. ವಿದ್ಯಾರ್ಥಿಗಳ ಮಾಹಿತಿಯನ್ನು examksu2016@gmail.com ಈ ಇ–ಮೇಲ್ ವಿಳಾಸಕ್ಕೆ ಸಕಾಲದಲ್ಲಿ ಕಳುಹಿಸುವುದು ಮತ್ತು ಪ್ರತಿಯನ್ನು (Hard Copy) 'ಕುಲಸಚಿವರು, (ಮೌಲ್ಯಮಾಪನ),

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018' –ಈ ವಿಳಾಸಕ್ಕೆ ಕಳುಹಿಸುವುದು. ಮಾದರಿ ಅನುಬಂಧವನ್ನು ಅಧಿಸೂಚನೆಯೊಂದಿಗೆ ಲಗತ್ತಿಸಲಾಗಿದೆ. ಅದೇ ರೀತಿಯಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ಹಾಗೂ ಭಾಷಾ ವಿನಾಯಿತಿ ಬಯಸುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕಪಟ್ಟಿಯನ್ನು ಲಗತ್ತಿಸಿ ಅನುಬಂಧದೊಂದಿಗೆ ಸಲ್ಲಿಸುವುದು.

5. ಅರ್ಜಿಗಳೊಂದಿಗೆ ಸಲ್ಲಿಸಿದ ನಾಮಾಂಕಿತ ಪಟ್ಟಿಯಲ್ಲಿ ಸಂಸ್ಥೆಯ ಹೆಸರು, ಪರೀಕ್ಷಾ ಕೇಂದ್ರದ ಸಂಖ್ಯೆ ಹಾಗೂ ಸಂಸ್ಥೆಯ ವಿಳಾಸ ಮತ್ತು ಸಂಸ್ಥೆಯ ಮುಖ್ಯಸ್ಥರ ದೂರವಾಣಿ ಸಂಖ್ಯೆಗಳನ್ನು ಸ್ಪಷ್ಟವಾಗಿ ನಮೂದಿಸುವುದು.
6. ಪರೀಕ್ಷೆ ತೆಗೆದುಕೊಳ್ಳುವ ಎಲ್ಲಾ ವಿದ್ಯಾರ್ಥಿಗಳಿಂದ ಇತ್ತೀಚಿನ ಎರಡು ಭಾವಚಿತ್ರಗಳನ್ನು ಪಡೆದು ಒಂದನ್ನು ಅರ್ಜಿಗೂ ಮತ್ತೊಂದನ್ನು ಪ್ರವೇಶಪತ್ರಕ್ಕೂ ಲಗತ್ತಿಸಿ, ಪ್ರಾಚಾರ್ಯರು ಅಥವಾ ಸಂಸ್ಥೆಯ ಮುಖ್ಯಸ್ಥರು ದೃಢೀಕರಿಸಿ ಕಳುಹಿಸುವುದು.
7. ಜನ್ಮದಿನಾಂಕದ ದಾಖಲೆಯಾಗಿ ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯ ಅಂಕಪಟ್ಟಿಯ ನಕಲುಪ್ರತಿಯನ್ನು ದೃಢೀಕರಿಸಿ ಅರ್ಜಿಯ ಜೊತೆಯಲ್ಲಿ ಲಗತ್ತಿಸಿರಬೇಕು.
8. ತಾವು ಕಳುಹಿಸಿದ ನಾಮಾಂಕಿತ ಪಟ್ಟಿಯನ್ನೇ ಅಂತಿಮವೆಂದು ಪರಿಗಣಿಸಿ ಪ್ರವೇಶಪತ್ರವನ್ನು ನೀಡಲಾಗುವುದು. ಆದ್ದರಿಂದ ನಾಮಾಂಕಿತ ಪಟ್ಟಿಯಲ್ಲಿ ಅಕ್ಷರದೋಷಗಳನ್ನು ಮತ್ತು ಹೆಸರುಗಳನ್ನು ಮರುಪರಿಶೀಲಿಸಿ ಕಳುಹಿಸುವುದು ಕಡ್ಡಾಯವಾಗಿರುತ್ತದೆ. ಮಾನ್ಯತೆ ನೀಡಿರುವ ಪತ್ರದಲ್ಲಿರುವಂತೆಯೇ ಸಂಸ್ಥೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸುವುದು.
9. ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದಲ್ಲಿ ಅಂತಹ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಿ, ಸಮೀಪದ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗುವುದು.
10. ಸಿದ್ಧಪಡಿಸಿದ ನಾಮಾಂಕಿತ ಪಟ್ಟಿಯ ಕೊನೆಯಲ್ಲಿ ಆಯಾ ಕೋರ್ಸ್‌ಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಶುಲ್ಕದ ವಿವರಗಳನ್ನು ಸರಿಯಾಗಿ ನಮೂದಿಸುವುದು.
11. ಪರೀಕ್ಷೆಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಕನಿಷ್ಠ ಶೇಕಡ 75ರಷ್ಟು ಹಾಜರಾತಿಯನ್ನು ಹೊಂದಿರಬೇಕು.
12. ಎಲ್ಲ ವಿದ್ಯಾರ್ಥಿಗಳೂ ಸಂಪೂರ್ಣವಾದ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಶುಲ್ಕ ವಿನಾಯಿತಿಗೆ ಅರ್ಹರಾದ ವಿದ್ಯಾರ್ಥಿಗಳು ಸಂಬಂಧಪಟ್ಟ ಇಲಾಖೆಗಳ ಮೂಲಕ ಅಗತ್ಯ ಮಾಹಿತಿಗಳನ್ನು ನೀಡಿ ನಿಯಮಾನುಸಾರ ಶುಲ್ಕ ಹಿಂಪಡೆದುಕೊಳ್ಳಬಹುದಾಗಿದೆ.
13. ಪ್ರತಿ ಪತ್ರಿಕೆಯಲ್ಲಿ ಒಟ್ಟು 80 ಅಂಕಗಳಿಗೆ ಲೇಖನ ಪರೀಕ್ಷೆ ನಡೆಯಲಿದೆ ಹಾಗೂ 20 ಅಂಕಗಳಿಗೆ ಆಂತರಿಕ ಅಂಕ ನೀಡುವುದು. ಸಂಸ್ಥೆಯ ಮುಖ್ಯಸ್ಥರು ವಿದ್ಯಾರ್ಥಿಗಳ ಆಂತರಿಕ ಅಂಕಗಳ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ XL sheetನಲ್ಲಿ ಸಿದ್ಧಪಡಿಸಿ ಪ್ರೋಗ್ರಾಮ್ ಹೆಸರು, ಸಂಸ್ಥೆಯ ಹೆಸರು, ಮುಖ್ಯಸ್ಥರ ಹೆಸರು, ಸಂಪರ್ಕ ಸಂಖ್ಯೆ, ಸಂಸ್ಥೆಯ ಕೋಡ್, ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು ಹಾಗೂ ಆಂತರಿಕ ಅಂಕಗಳನ್ನು ನಮೂದಿಸಿ ದಿನಾಂಕ: 23.10.2025ರ ಮೊದಲು examksu2016@gmail.com ಈ ಇ–ಮೇಲ್ ವಿಳಾಸಕ್ಕೆ ಹಾಗೂ ದೃಢೀಕೃತ ಪ್ರತಿಯನ್ನು 'ಕುಲಸಚಿವರು(ಮೌಲ್ಯಮಾಪನ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು' ಇವರಿಗೆ ಕಳುಹಿಸಬೇಕು.

26/9/25

## ಭಾಗ 2

### ವಿಶೇಷ ಸರ್ಟಿಫಿಕೇಟ್ ಪ್ರೋಗ್ರಾಮ್‌ಗೆ ಸಂಬಂಧಿಸಿದ ನಿಯಮಗಳು ಹಾಗೂ ಸೂಚನೆಗಳು

ಈ ಕೆಳಗೆ ಸೂಚಿಸಿರುವ ಪ್ರೋಗ್ರಾಮ್‌ಗಳನ್ನು ವಿಶೇಷ ಸರ್ಟಿಫಿಕೇಟ್ ಪ್ರೋಗ್ರಾಮ್‌ಗಳೆಂದು ಪರಿಗಣಿಸಲಾಗಿದೆ.

| ಕ್ರಂ.ಸಂ. | ಪ್ರೋಗ್ರಾಮ್‌ಗಳ ವಿವರ |
|---|---|
| 1 | ಸಮಯಸಾರ (ಜೈನಸಿದ್ಧಾಂತ) |
| 2 | ಈಶೋಪನಿಷತ್ |
| 3 | ದ್ವೈತವೇದಾಂತ |
| 4 | ಪೂರ್ವಮೀಮಾಂಸಾ |
| 5 | ಲಲಿತಾಸಹಸ್ರನಾಮ |
| 6 | ಫಂಕ್ಷನಲ್ ಸಂಸ್ಕೃತ |
| 7 | ಏಸ್ತಟಿಕ್ಸ್ |
| 8 | ಹಸ್ತಪ್ರತಿಶಾಸ್ತ್ರ |
| 9 | ಮಹಾಭಾರತ |
| 10 | ನ್ಯಾಯಶಾಸ್ತ್ರ ಪ್ರವೇಶಿನೀ |
| 11 | ಸಂಸ್ಕೃತ ಇತಿಹಾಸ |
| 12 | ಲೇಖನಕೌಶಲ |
| 13 | ಜೀವನಧರ್ಮಯೋಗ |
| 14 | ಆಯುಃಪಾಕಶಾಸ್ತ್ರ |
| 15 | ಆಯುಸ್ಸಂಸ್ಕೃತಮ್–1 |
| 16 | ಆಯುಸ್ಸಂಸ್ಕೃತಮ್–2 |
| 17 | ವಿಶಿಷ್ಟಾದ್ವೈತ |
| 18 | ಸದಾಚಾರ |
| 19 | ಭಾವರಾಮಾಯಣ |
| 20 | ನೀತಿಶತಕಂ |
| 21 | ಸುಭಾಷಿತಸಂಸ್ಕೃತಂ |
| 22 | ಪಾಲಿ |
| 23 | ಪ್ರಾಕೃತ |
| 24 | Koutilya"s Artha–Shastra And Modern Commerce And Management |

| ಈ ಮೇಲೆ ಸೂಚಿಸಿದ 24 ವಿಷಯಗಳಲ್ಲಿನ ಸರ್ಟಿಫಿಕೇಟ್ ಪ್ರೋಗ್ರಾಮ್‌ನ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಹಾಗೂ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: | ದಂಡಶುಲ್ಕ ಸಹಿತ ಶುಲ್ಕ ಪಾವತಿಸಲು ಹಾಗೂ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: |
|---|---|
| **15.10.2025** | **18.10.2025** |

| **ಪರೀಕ್ಷಾ ಶುಲ್ಕದ ವಿವರ** | |
|---|---|
| ಪರೀಕ್ಷಾ ಶುಲ್ಕ | **ರೂ. 200.00** |
| ಡಂಡ ಶುಲ್ಕ ಸಹಿತ ಪರೀಕ್ಷಾ ಶುಲ್ಕ | **ರೂ. 100+200 = 300.00** |

| | |
|---|---|
| ಪರೀಕ್ಷೆ ನಡೆಯಲಿರುವ ಸಂಭಾವ್ಯ ದಿನಾಂಕ | **16.11.2025** |

**ಸೂಚನೆಗಳು:**

1. ಈ ಮೇಲೆ ಸೂಚಿಸಿದ 24 ವಿಷಯಗಳಲ್ಲಿನ ಸರ್ಟಿಫಿಕೇಟ್ ಪ್ರೋಗ್ರಾಮ್‌ನ ವಿದ್ಯಾರ್ಥಿಗಳು SBI Payment Gateway ಮೂಲಕ ಶುಲ್ಕ ಪಾವತಿಸಿ Google Form ಮೂಲಕ ಅರ್ಜಿಯನ್ನು ತುಂಬಬೇಕು.
2. Exam Application Google formನ link ಅನ್ನು ಪ್ರೋಗ್ರಾಮ್ ಸಂಯೋಜಕರನ್ನು ಸಂಪರ್ಕಿಸಿ ಪಡೆದುಕೊಳ್ಳುವುದು. (Special Certificate Program – Exam Application form 24–25 Google form: **https://forms.gle/UBSaowGCMbXV68nN9**)
3. SBI Payment gateway ಮೂಲಕ ಶುಲ್ಕ ಪಾವತಿಸುವ ವಿಧಾನ: ksu.ac.in ⇨ Fee payment ⇨ Educational Institutions ⇨ KARNATAKA SANSKRITH VISHWAVIDYALAYA Karnataka ⇨ Payment Category ⇨ Certificate/Diploma/PG Diploma Exam Fees.
4. ಅಂತಿಮ ದಿನಾಂಕದ ನಂತರ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
5. ಪ್ರತಿ ಪತ್ರಿಕೆಯಲ್ಲಿ ಒಟ್ಟು 80 ಅಂಕಗಳಿಗೆ ಲೇಖನ ಪರೀಕ್ಷೆ ನಡೆಯಲಿದೆ ಹಾಗೂ 20 ಅಂಕಗಳಿಗೆ ಆಂತರಿಕ ಅಂಕ ಇರಲಿದೆ. ವಿಶೇಷ ಸರ್ಟಿಫಿಕೇಟ್ ಪ್ರೋಗ್ರಾಮ್‌ನ ಸಂಯೋಜಕರು ವಿದ್ಯಾರ್ಥಿಗಳ ಆಂತರಿಕ ಅಂಕಗಳ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ XL sheet ನಲ್ಲಿ ಸಿದ್ಧಪಡಿಸಿ ಪ್ರೋಗ್ರಾಮ್ ಹೆಸರು, ಸಂಯೋಜಕರ ಹೆಸರು, ದೂರವಾಣಿ ಸಂಖ್ಯೆ, ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು, ಆಂತರಿಕ ಅಂಕಗಳನ್ನು ನಮೂದಿಸಿ ದಿನಾಂಕ: 23.10.2025ರ ಮೊದಲು examksu2016@gmail.com ಈ ಇ-ಮೇಲ್ ವಿಳಾಸಕ್ಕೆ ಹಾಗೂ ದೃಢೀಕೃತ ಪ್ರತಿಯನ್ನು 'ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018' –ಇವರಿಗೆ ಕಳುಹಿಸಬೇಕು.

**ಆದೇಶದ ಮೇರೆಗೆ,**

26/9/25

ಕುಲಸಚಿವರು (ಮೌಲ್ಯಮಾಪನ)–ಪ್ರ

Registrar (Evaluation)
Karnataka Samskrita Vishwavidyalaya
Bengaluru - 560 018.

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತಶಾಖೆ, ಕಸಂವಿ
2. ಮಾನ್ಯ ಕುಲಸಚಿವರ ಆಪ್ತಶಾಖೆ, ಕಸಂವಿ
3. ನಿರ್ದೇಶಕರು, ಅಧ್ಯಯನಾಂಗ, ಕಸಂವಿ
4. ಹಣಕಾಸು ಅಧಿಕಾರಿಗಳು, ಕಸಂವಿ
5. ಸಂಯೋಜಕರುಗಳು /ಮುಖ್ಯಸ್ಥರುಗಳು, ಕಸಂವಿ
6. ಮುಖ್ಯಸ್ಥರು ಸಂಬಂಧಪಟ್ಟ ಶೋಧಕೇಂದ್ರಗಳು/ವಿದ್ಯಾಕೇಂದ್ರಗಳು
7. ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ ಪ್ರಕಟಣಾ ಪ್ರತಿ
8. ಸೂಚನಾ ಫಲಕ ಪ್ರಕಟಣಾ ಪ್ರತಿ
9. ಕಛೇರಿ ಪ್ರತಿ

FORM-01

| SL.NO | REG NO | Students Name | Fathers Name | Name of the Program | Name of the I Paper | Name of the II Paper |
|---|---|---|---|---|---|---|
| 1 | | SHRUTHI H M | MUNIYAPPA | JYOTHISHY | | |
| 2 | | SHRIVANI K E | APPORAO K | VASTU | | |
| 3 | | SURESH BABU | RAMASWAMY | YOGA | | |
| 4 | | VINUTHA B T | THIPPESWAMY | PALI | | |

FORM-02

KARNATAKA SAMSKRIT UNIVERSITY, CHAMARAJPETE, BENGALURU-560018

Name of the Institution & Code:

Name of the Program:

| SL. NO | Students Name | Program | Fathers Name | Mothers Name | Gender | CAT | FEE | UPI NO |
|---|---|---|---|---|---|---|---|---|
| 1 | SHRUTHI H M | JYOTHISHYA | MUNIYAPPA | RANGAMMA | FEMALE | GEN | 500 | T21210456099 |
| 2 | SHRIVANI K E | VASTU | APPORAO K | VASUMATI | FEMALE | GEN | 500 | T21210456099 |
| 3 | SURESH | YOGA | RAMASWAMY | SAVITHRI | MALE | GEN | 500 | T21210456099 |
| 4 | VINUTHA B T | PAALI | THIPPAYYA | GAYATRI | FEMALE | GEN | 500 | T21210456099 |

DETAILS OF NR

| SL. NO | Program | SC | | ST | | CAT-I | | OBC | | GM | | REPEATER | | TOTAL | |
|---|---|---|---|---|---|---|---|---|---|---|---|---|---|---|---|
| | | M | F | M | F | M | F | M | F | M | F | M | F | M | F |
| 1 | JYOTHISHYA | 1 | 0 | 0 | 1 | 0 | 0 | 1 | 0 | 1 | 2 | 3 | 1 | 6 | 4 |
| **TOTAL** | | **1** | **0** | **0** | **1** | **0** | **0** | **1** | **0** | **1** | **2** | **3** | **1** | **6** | **4** |

PRINCIPAL CONTACT NUMBER & E-MAIL ID OF COLLEGE:

## Internal Marks format

| | |
|---|---|
| Name of the Institution | |
| Code of the Institution | |
| Name of the Principal/Coordinator | |
| Name of the Program | |
| Contact number of the Principal/Coordinator | |

| **Sl. No.** | **Name of the Student** | **Fathers Name** | **Assignment (Max.10)** | **Seminar (Max.10)** | **Total (Max.20)** |
|---|---|---|---|---|---|
| | | | | | |

**Signature of the Principal/Coordinator**